ಅ) ಬೆಂಗಳೂರು ನಗರದ ಜಯನಗರ ಕ್ರೀಡಾಂಗಣವನ್ನು ಅಭಿವೃದ್ಧಿಗೊಳಿಸಲು 1995-96ನೇ ಸಾಲಿನ ಕಾರ್ಯಕ್ರಮ ಪಟ್ಟಿಯಲ್ಲಿ ಸೇರಿರುವುದಿಲ್ಲ.

ಆ) ಜಯನಗರ ಕ್ರೀಡಾಂಗಣದ ಅಭಿವೃದ್ಧಿಗಾಗಿ 1996ನೇ ಮಾರ್ಚ್‌ಯೊಳಗೆ ಯಾವುದೇ ಹಣವನ್ನು ವಿಚ್ಛೆ ಮಾಡುವ ನಿರೀಕ್ಷೆ ಇರುವುದಿಲ್ಲ.

ಶ್ರೀ ರಾಮಲಿಂಗರೆಡ್ಡಿ : ಮಾನ್ಯ ಅಧ್ಯಕ್ಷರೇ, ಉತ್ತರವನ್ನೇನೋ ಓದಿಸಿದ್ದಾರೆ, ಅದರಲ್ಲಿ ನಮ್ಮ ಬೆಂಗಳೂರು ನಗರದಲ್ಲಿದ್ದ ಕಂಠೀರವ ಸ್ಟೇಡಿಯಮನ್ನು ಒಡೆದು ಹಾಕಿದ್ದಾರೆ. ಈ ಸ್ಟೇಡಿಯಮ ಒಂದನ್ನು ಬಿಟ್ಟರೆ ಬೆಂಗಳೂರಿನಲ್ಲಿ ಇರುವ ಮತ್ತೊಂದು ಮೊಡ್ಡ ಸ್ಟೇಡಿಯಮ್ ಎಂದರೆ ಜಯನಗರದಲ್ಲಿರತಕ್ಕಂಥ ಸ್ಟೇಡಿಯಮ್. ಅಲ್ಲಿ ಪ್ರತಿ ದಿನ ಸಾವಿರಾರು ಜನರು, ಮಕ್ಕಳುಗಳು ಬಂದು ಆಟವಾಡುತ್ತಾರೆ. ಅಲ್ಲಿ ಬೇಕಾದಷ್ಟು ಕೆಲಸಗಳಾಗಬೇಕಾದ ಅವಶ್ಯಕತೆ ಇದೆ, ಅಲ್ಲಿ ಟ್ರಾಕ್ ಹಾಳಾಗಿದೆ, ಸುಮಾರು ಒಂದು ವರ್ಷದಿಂದ ಬಾತ್ ರೂಂ ಕೂಡ ರಿಪೇರಿಯಾಗಿಲ್ಲ. ಹಿಂದೆ ಮುಖ್ಯಮಂತ್ರಿಗಳು ಅಲ್ಲಿ ಯಾವುದೇ ಒಂದು ಸಮಾರಂಭಕ್ಕೆ ಬಂದಿದ್ದಾಗ ಅಧಿಕಾರಿಗಳಿಗೆ, ಆಗಬೇಕಾದ ಕೆಲಸಗಳನ್ನು ಮಾಡಿಸಲು ಸೂಚನೆಯನ್ನು ಕೊಟ್ಟಿದ್ದರು. ಆದರೆ ಈ ವರ್ಷದಲ್ಲಿ 96-97ರಲ್ಲಿ ಏನೂ ಕೆಲಸಗಳನ್ನು ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದ್ದಾರೆ. ಇಲ್ಲಿ ಬೇಕಾದಷ್ಟು ಕೆಲಸಗಳು ಆಗಬೇಕಾಗಿದೆ. ಮತ್ತೆ ಜಯನಗರದಲ್ಲಿರುವ ಸ್ವಿಮಿಂಗ್ ಪೂಲ್ ರಿಪೇರಿ ಕೆಲಸವನ್ನು ಈಗಾಗಲೇ ಒಂದೂವರೆ ವರ್ಷದ ಹಿಂದೆ ತೆಗೆದುಕೊಂಡಿದ್ದು ಇದುವರೆಗೂ ಕೂಡ ಅದು ಪೂರ್ಣವಾಗಿಲ್ಲ. ಈ ಎರಡೂ ಕೆಲಸಗಳನ್ನು ಆದಷ್ಟು ಬೇಗ ಮಾಡಿಕೊಡಿಸಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ರೋಷನ್ ಬೇಗ್ : ಮಾನ್ಯ ಅಧ್ಯಕ್ಷರೇ, ಸುಮಾರು 20 ವರ್ಷಗಳಿಂದ ಜಯನಗರದಲ್ಲಿ ಒಂದು ಸ್ಟೇಡಿಯಮ್ ಇದೆ. ಆ ಸ್ಟೇಡಿಯಮನಲ್ಲಿ ಅಥ್ಲೆಟಿಕ್ ಟ್ರಾಕ್, ಸ್ಕೇಟಿಂಗ್ ರೌಂಡ್, ಬ್ಯಾಸ್ಕೆಟ್ ಬಾಲ್, ಬ್ಯಾಡ್ಮಿಂಟನ್, ಈ ಸ್ಪೋರ್ಟ್ಸಗಳ್ಲಾ ಸೌಲಭ್ಯಗಳು ಇವೆ. ಈಗ ಮಾನ್ಯ ಸದಸ್ಯರು ಮಾತನಾಡುತ್ತ ಅಲ್ಲಿರತಕ್ಕಂಥ ಸ್ವಿಮಿಂಗ್ ಪೂಲ್ ಮತ್ತು ಬಾತ್ ರೂಂಗಳಲ್ಲಿ ಸರಿಯಾಗಿ ರಿಪೇರಿ ಪೂರ್ಣವಾಗಿಲ್ಲ ಎಂದು ಹೇಳಿದ್ದಾರೆ. ಆದಕಾರಣ ನಾನೇ ಸ್ವತಃ ಅವರನ್ನು ಕರೆದುಕೊಂಡು ಹೋಗಿ ಅಲ್ಲಿ ಪರಿಶೀಲನೆ ಮಾಡಿ ಅಲ್ಲಿ ಏನು ಕೆಲಸಗಳಾಗಬೇಕಿದೆ ಅದನ್ನು ಮಾಡಿಸಿಕೊಡುತ್ತೇನೆ.

ಫಟಪ್ರಭಾ ಬಲದಂಡೆ ಕಾಲುವೆ ಪ್ರಗತಿ

136 - ಶ್ರೀ ಚಂದ್ರಶೇಖರ ನಾಯಕ್ (ಗೋಕಾಕ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಘಟಪ್ರಭಾ ಬಲದಂಡೆ ಕಾಲುವೆಯ ಉದ್ದಳತೆ ಎಷ್ಟು ?

ಆ) ಈವರೆಗೆ ಪೂರ್ತಿಯಾದ ಕಾಲುವೆಯ ಉದ್ದಳತೆ ಎಷ್ಟು ? ಯಾವ ಯಾವ ಸ್ಥಳದಲ್ಲಿ ಕಿ.ಮೀ. ವಿವರ ಕೊಡುವುದು

ಇ) ಪ್ರಸಕ್ತ ಸಾಲಿನಲ್ಲಿ ಕೈಗತ್ತಿಕೊಳ್ಳಲಾದ ಕಾಲುವ ಕಲಸದ ಉದ್ದಳತ ಎಷ್ಟು ?

ಈ) ಮಕ್ಕಳಗೇರಿ ಮತ್ತು ಹಿರೇಹಪ್ಪಿ ಮೇಲು ಸೇತುವೆಗಳ ಕೆಲಸ ಯಾವಾಗ ಪೂರ್ಣಗೊಳ್ಳುವುದು ?

ಉ) ಗೋಕಾಕ್ ತಾಲೂಕು ಮಟ್ಟಕ್ಕೆ ಈ ನೀರು 1996ರಲ್ಲಿ ನೀರಾವರಿ ಸೌಲಭ್ಯ ಒದಗಿಸಲು ಸಾಧ್ಯವಾಗುವುದೇ ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಘಟಪ್ರಭಾ ಬಲದಂಡೆ ಕಾಲುವ ಉದ್ದಳತೆ 202 ಕಿಲೋಮೀಟರ್.

ಆ) ಇಲ್ಲಿಯವರೆಗೆ ಪೂರ್ತಿಯಾದ ಕಾಲುವೆಯ ಉದ್ದಳತೆ - 44 ಕಿಲೋಮೀಟರ್

ವಿವರ ಈ ರೀತಿ ಇದೆ :

ಕಿ.ಮೀ. 00 ಯಿಂದ 37

ಕಿ.ಮೀ. 41 ರಿಂದ 45

ಕಿ.ಮೀ. 52 ರಿಂದ 53

ಇ) 1 ಕಿಲೋಮೀಟರ್. 58 ಕಿ.ಮೀ.ನಲ್ಲಿ ಕೆಲಸ ಕೈಗತ್ತಿಕೊಳ್ಳಾಲಾಗಿದೆ.

ಈ) ಮಕ್ಕಳಗೇರಿ ಜಲವಾಹಕ ಸೇತುವೆಯನ್ನು ಜುಲೈ 96ಕ್ಕೆ ಪೂರ್ಣಗೊಳಿಸುವ ಗುರಿಯನ್ನು ಹೊಂದಲಾಗಿದೆ.

ಹಿರೇಹಪ್ಪಿ ಜಲವಾಹಕ ಸೇತುವೆಯನ್ನು ಏಪ್ರಿಲ್ 97ರಲ್ಲಿ ಪೂರ್ಣಗೊಳಿಸುವ ಗುರಿಹೊಂದಲಾಗಿದೆ.

ಉ) ಸಾಧ್ಯವಾಗುವುದು.

ಶ್ರೀ ಎಸ್. ಚಂದ್ರಶೇಖರ್ ನಾಯಕ್ : ಮಾನ್ಯ ಅಧ್ಯಕ್ಷರೇ, ಘಟಪ್ರಭ ಬಲದಂಡೆ ಕಾಲುವೆಗೆ ನೀರು ಬಿಡುತ್ತೇವೆಂದು ಹೇಳಿದ್ದರು. ಅದರ ಸಲುವಾಗಿ ಮಾನ್ಯ ಮುಖ್ಯಮಂತ್ರಿಗಳಲ್ಲಿಯೂ ಕೂಡ ವಿನಂತಿಸಿಕೊಳ್ಳಲಾಗಿತ್ತು, ಎಲ್ಲಾ ಜಿಲ್ಲಾ ಮಂತ್ರಿಗಳನ್ನು ವಿನಂತಿಸಿಕೊಳ್ಳಲಾಗಿತ್ತು. ಆ ಕಾಲುವೆಗೆ ಗೋಕಾಕ್ ಉಪ ಕಾಲುವೆಯಿಂದ ನೀರು ಬಿಡಬೇಡಾಗಿತ್ತು, ಅದು ಪೂರ್ಣಗೊಂಡಿದೆ. ಹಳ್ಳಕ್ಕೆ ನೀರು ಬಿಡುವುದರಿಂದ ಅಂತರ್ಜಲ ಮಟ್ಟ ಹೆಚ್ಚಾಗಿ ಕುಡಿಯುವುದಕ್ಕೆ ನೀರು ಹೆಚ್ಚಾಗಿ ಸಿಗುತ್ತದೆ ಎನ್ನುವ ಭಾವನೆಯನ್ನು ಇಟ್ಟುಕೊಂಡು ನಾನು ಪ್ರಾರ್ಥನೆ ಮಾಡಿಕೊಂಡಿದ್ದೆ. ಆದರೆ ಆ ಕೆರೆಗೂ ನೀರು ಬರಲಿಲ್ಲ, ಹಳ್ಳಕ್ಕೂ ನೀರು ಬರಲಿಲ್ಲ, ಉಪ ಕಾಲುವೆಗೂ ನೀರು ಬರಲಿಲ್ಲ. ಅದಕ್ಕಾಗಿ ಕುಡಿಯಲಿಕ್ಕಾದರೂ ಸದ್ಯದ ಪರಿಸ್ಥಿತಿಯಲ್ಲಿ ನೀರು ಬಿಟ್ಟರೆ, ಬಹಳ ಒಳ್ಳೆಯದು ಎಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು (ಮುಖ್ಯ ಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೇ, ಈಗಾಗಲೇ '0' ಯಿಂದ '37' ಕಿ.ಮೀ.ವರೆಗೂ ಕಾಲುವೆಯಾಗಿದೆ. ಆದರೆ 38ನೇ ಕಿ.ಮೀ. ಹತ್ತಿರ ಬರತಕ್ಕಂಥ ದಾಸನಾಳ ಸುರಂಗ ಮಾರ್ಗದ ಪಕ್ಕದಲ್ಲಿ ಒಂದು ಸೇತುವೆಯನ್ನು ಕಟ್ಟಬೇಕಾದ ಕೆಲಸವಿರುವುದರಿಂದ ನೀರನ್ನು ತಕ್ಷಣವಲ್ಲಿ ಕೊಡುವುದಕ್ಕಾಗಿಲ್ಲ. 37ನೇ ಕಿ.ಮೀ.ನಲ್ಲಿ ಬರತಕ್ಕಂಥದ್ದಕ್ಕೆ ನೀರನ್ನು ಕೊಟ್ಟು, ಆ ಉಪಕಾಲುವೆಗಳಿಗೆ ನೀರನ್ನು ಬಿಡಬೇಕಾಗಿದೆ ಮತ್ತು ಎಡದಂಡ ಕಾಲುವೆಗೆ ಲೈನಿಂಗ್ ಮಾಡಬೇಕಾಗಿದೆ. ಬಲದಂಡೆ ಕಾಲುವೆಯ ಉಪ ಕಾಲುವೆಗಳ ಕೆಲಸವನ್ನು ಇಷ್ಟರಲ್ಲಿಯೇ ಪೂರ್ಣಗೊಳಿಸಲಾಗುವುದು. ಈಗಾಗಲೇ ನಿಮಗೆ ತಿಳಿದಿರುವಂತೆ ಕಿ.ಮೀ. 0 ಯಿಂದ 37 ರವರೆಗೆ ಮತ್ತು 41ನೇ ಕಿ.ಮೀ. ನಿಂದ 45ನೇ ಕಿ.ಮೀ. ವರೆಗೆ, 51ನೇ ಕಿ.ಮೀ.ನಿಂದ 53ನೇ ಕಿ.ಮೀ. ವರೆಗೆ ಕೆಲಸವಾಗಿದೆ. ಕಿ.ಮೀ. 38ರಿಂದ 40, 46ನೇ ಕಿ.ಮೀ. ನಿಂದ 51, 52ನೇ ಕಿ.ಮೀ. ನಿಂದ 56ನೇ ಕಿ.ಮೀ. ನ ಕೆಲಸದಲ್ಲಿ ಪ್ರಗತಿಯ ಹಂತದಲ್ಲಿದೆ ಇದು ಮುಗಿದ ತಕ್ಷಣ ನೀರನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಎಸ್. ಚಂದ್ರಶೇಖರ್ ನಾಯಕ್ : ಅಧ್ಯಕ್ಷರೇ, ಈಗ ಸಧ್ಯಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಮಾಡಲಿಕ್ಕೆ ಆ ಕಾಲುವೆಗೆ ನೀರನ್ನು ಬಿಡುವುದರ ಬಗ್ಗೆ ಸಚಿವರ ಹೇಳಿಕೆಯನ್ನು ಕೊಡಲಿಲ್ಲ. ಅದರ ಬಗ್ಗೆ ಹೇಳಿಕೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಅಧ್ಯಕ್ಷರೇ, ಈಗ 37ನೇ ಕಿ.ಮೀ.ವರೆಗೆ ಕಾಲುವೆ ಇರುವುದರಿಂದ ಮತ್ತು ಉಪ ಕಾಲುವೆಗಳ ಕೆಲಸ ಪ್ರಗತಿಯಲ್ಲಿರುವುದರಿಂದ ಕುಡಿಯುವ ನೀರಿನ ವ್ಯವಸ್ಥೆ ಅಲ್ಲಿ ಏನಾದರೂ ಮಾಡಲಿಕ್ಕೆ ಸಾಧ್ಯವಿದ್ದರೆ ನಮ್ಮ ಅಧಿಕಾರಿಗಳ ಜೊತೆ ಮಾತನಾಡಿ ಅದನ್ನು ಒದಗಿಸಿಕೊಡುವಂಥ ಪ್ರಯತ್ನವನ್ನು ನಾನು ಮಾಡುತ್ತೇನೆ.

ಶ್ರೀ ಎಸ್. ಚಂದ್ರಶೇಖರ ನಾಯಕ್ : ಈಗಾಗಲೇ ಗೋಕಾಕ್ ಉಪ ಕಾಲುವೆ ಪೂರ್ಣಗೊಂಡಿದೆ. ಕಟ್ಟಿಕೆರೆಗೆ ನೀರು ಬರಲಿಕ್ಕೆ ಸಾಧ್ಯವಿದೆ. ಈಗ ನೀರು ಬರಲಿಕ್ಕೆ ಎಷ್ಟು ನೀರನ್ನು ಬಿಡಬೇಕೋ ಅಷ್ಟನ್ನು ಬಿಡಲಿಲ್ಲ. ಕೇವಲ ಒಂದೇ ದಿವಸಕ್ಕಾಗುವಷ್ಟು ನೀರನ್ನು ಬಿಟ್ಟುಬಿಟ್ಟರು. ಆ ಹುಲಿಕಟ್ಟಿ ಮತ್ತು ಕೊಳವೆ ಗಂಡ್ಲಿನಮಡಿಗೆ ಹಳ್ಳಕ್ಕೆ ನೀರು ಬಿಟ್ಟರೆ, ಆ ಕೊಳವೆ ಬಾವಿಯ ನೀರಿನ ಮಟ್ಟ ಏರುತ್ತದೆ ಎನ್ನುವ ಭಾವನೆ ಇಟ್ಟುಕೊಂಡು ಈ ವಿನಂತಿಯನ್ನು ತಮ್ಮ ಮುಂದೆ ಇಡಲಾಗಿದೆ.

ಶ್ರೀ ಎಂ.ಪಿ. ಪ್ರಕಾಶ್ : ಅಧ್ಯಕ್ಷರೇ, ಅಲ್ಲಿ ಬಂದಿರತಕ್ಕಂಥ ಪ್ರಶ್ನೆ ಇಷ್ಟೆ. ಅಲ್ಲಿ ಒಂದು ಸಣ್ಣ ಸೇತುವೆಯನ್ನು ಕಾಲುವೆಗ ಕಟ್ಟಬೇಕಾಗಿದೆ. ಆ ಸೇತುವೆ ಕಟ್ಟತಕ್ಕಂಥ ಒಂದು ಕಾರಣವಿರುವುದರಿಂದ ಮುಂದೆ ನೀರನ್ನು ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಈಗಾಗಲೇ ಪ್ರಾರಂಭ ಮಾಡಿರತಕ್ಕಂಥ 37ನೇ ಕಿ.ಮೀ. ಕಾಲುವೆಗೆ ನೀರನ್ನು ಕೊಟ್ಟರೆ ಅವರಿಗೆ ಕುಡಿಯುವ ನೀರಿಗೆ ಅನುಕೂಲವಾಗುತ್ತದೆ ಎಂದರೆ ಖಂಡಿತವಾಗಿಯೂ ಅದನ್ನು ಮಾಡಿ ಕೊಡಲಿಕ್ಕೆ ಅಧಿಕಾರಿಗಳ ಜೊತೆ ನಾನು ಮಾತನಾಡಿ, ಆ ವಿಷಯವನ್ನು ತಿಳಿಸುತ್ತೇನೆ.

ಶ್ರೀ ಜಿ.ಬಿ. ಚಿಮ್ಮನಕಟ್ಟಿ : ಮಾನ್ಯ ಅಧ್ಯಕ್ಷರೇ, ಘಟಪ್ರಭಾ ಬಲದಂಡೆ ಯೋಜನೆ ಸುಮಾರು 30

ವರ್ಷಗಳಿಂದ ಪ್ರಾರಂಭವಾಗಿರತಕ್ಕಂಥ ಯೋಜನೆ. ಈ ಬಲದಂಡೆ ಕಾಲುವೆಗೆ ಎಷ್ಟು ಹಣವನ್ನು ಒದಗಿಸಿ ಎಷ್ಟು ವರ್ಷದಲ್ಲಿ ಇದನ್ನು ಮುಗಿಸುವುದಕ್ಕೆ ತಾವು ಕ್ರಮ ಕೈಗೊಂಡಿದ್ದೀರಿ ಎಂಬ ಬಗ್ಗೆ ದಯವಿಟ್ಟು ಹೇಳಬೇಕು.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾವು ಹಣವನ್ನು ತ್ವರಿತಗತಿಯಿಂದ ಕೊಡುತ್ತಿದ್ದೇವೆ. ಈ 2000 ಇಸವಿಯೊಳಗೆ ಮುಗಿಸಲಿಕ್ಕೆ ನಾವು ಪ್ರಯತ್ನವನ್ನು ಮಾಡುತ್ತಿದ್ದೇವೆ. ಅದರ ಜೊತೆಜೊತೆಗೆ ಕಳೆದ ಒಂದು ವರ್ಷದಲ್ಲಿ ಈ ನಿಟ್ಟಿನಲ್ಲಿ ಎಷ್ಟು ಪ್ರಗತಿಯನ್ನು ಸಾಧಿಸಲಾಗಿದೆ ಎಂಬ ವಿಷಯ ತಮಗೆ ಗೊತ್ತಿರುವುದರಿಂದ ನಾವು ಇದರೊಳಗೆ ಪ್ರಾಮಾಣಿಕವಾದಂಥ ಪ್ರಯತ್ನವನ್ನು ಮಾಡುತ್ತಿದ್ದೇವೆ. ಇದನ್ನು ಖಂಡಿತವಾಗಿಯೂ ಕೂಡ 2000 ಇಸವಿಯೊಳಗಾಗಿ ಬಚಾವತ್ ಆಯೋಗದ ಪ್ರಕಾರ ನೀರನ್ನು ನಿಲ್ಲಿಸಬೇಕಾಗಿರುವುದು ಏನಿದೆ ಅದನ್ನು ನಾವು ಖಂಡಿತವಾಗಿಯೂ ಮಾಡುತ್ತೇವೆ. ಅದರ ಜೊತೆಜೊತೆಗೆ ಈ ಕಾಲುವೆ ಕೆಲಸವನ್ನು ಕೂಡ ಮಾಡುತ್ತೇವೆ. ಈಗಾಗಲೇ ತಮಗೆ ಗೊತ್ತಿರುವಂತೆ ಭೂ ಸ್ವಾಧೀನ ಕ್ರಮಗಳು ಬಹಳ ವಿಳಂಬವಾಗಲು ಕಾರಣವಾಗಿದ್ದವು. ಈಗ ಅಲ್ಲಿರತಕ್ಕಂಥ ಜಾಂದಾರ್ ಎನ್ನುವ ಒಬ್ಬ ಅಧಿಕಾರಿಗೆ ಕರ್ನಾಟಕ ರಾಜ್ಯದ ಮುಖ್ಯ ಕಾರ್ಯದರ್ಶಿಗೆ ಇರತಕ್ಕಂಥ ಅಧಿಕಾರವನ್ನೇ ಅವರಿಗೆ ಕೊಟ್ಟು ಅಲ್ಲಿ ನೇಮಕಾತಿ ಮಾಡಲಾಗಿದೆ. ಅವರ ಕೈಕೆಳಗೆ ಇರಬೇಕಾಗಿರುವ ಸಿಬ್ಬಂದಿ ವರ್ಗದವರನ್ನೂ ಕೂಡ ಅವರಿಗೆ ಕೊಟ್ಟಿರುವುದರಿಂದ ಇವೊತ್ತು ಭೂ ಸ್ವಾಧೀನ ಕ್ರಮಗಳು ಕೂಡ ಬಹಳ ತ್ವರಿತ ಗತಿಯಲ್ಲಿ ನಡೆಯುತ್ತಿದೆ. ಅದರ ಬಗ್ಗೆ ನನಗೆ ಭರವಸೆ ಇದೆ.

ಶ್ರೀ ಚಂದ್ರಶೇಖರ ಮಲ್ಲಿಕಾರ್ಜುನ ಮಾಮನಿ : ಅಧ್ಯಕ್ಷರೇ, ಘಟಪ್ರಭ ಕಾಲುವೆಯು ನನ್ನ ಮತಕ್ಷೇತ್ರದಲ್ಲಿಯೂ ಹಾದು ಹೋಗುತ್ತದೆ. ಬಜೆಟ್ಟಿನಲ್ಲಿ ಹಣವಿಲ್ಲದೇ ಅಲ್ಲಿ ಒಬ್ಬ ಅಧಿಕಾರಿಯನ್ನು ನೇಮಕ ಮಾಡುವುದರಿಂದ ಕೆಲಸ ಸಾಧ್ಯವಾಗುವುದಿಲ್ಲ. ಬಜೆಟ್ ಈ ಪ್ರಸ್ತಾವನೆಗೆ ಹೆಚ್ಚಿನ ದುಡ್ಡಿಲ್ಲ. ಹೋದ ವರ್ಷ ಎಷ್ಟಿತ್ತು ಅದಕ್ಕಿಂತ ಹೆಚ್ಚಿಗೆಯೂ ಇಲ್ಲ. ಹೆಚ್ಚಿನ ಪ್ರಮಾಣದಲ್ಲಿ ದುಡ್ಡನ್ನು ಒದಗಿಸಿ ಆ ಕೆಲಸವನ್ನು ಬೇಗ ಮುಗಿಸುತ್ತಾರೆಯೇ ಎಂಬುದನ್ನು ತಮ್ಮ ಮುಖಾಂತರ ಕೇಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಅಧ್ಯಕ್ಷರೇ, ಮಾನ್ಯ ಸದಸ್ಯರಿಗೆ ಈಗಾಗಲೇ ಗೊತ್ತಿರುವಂತೆ ನಾವು ಕೃಷ್ಣಾ ಜಲ ಭಾಗ್ಯ ನಿಗಮದ ಮೂಲಕ 186 ಕೋಟಿ ರೂ.ಗಳ ಸಂಪನ್ಮೂಲಗಳನ್ನು ಕ್ರೋಢೀಕರಿಸಿದ್ದೇವೆ. ಎರಡನೇ ಹಂತದಲ್ಲಿಯೂ ಕೂಡ ಕೃಷ್ಣಾ ಜಲ ಭಾಗ್ಯ ನಿಗಮದ ಮುಖಾಂತರ ಸುಮಾರು 400 ಕೋಟಿ ರೂ.ಗಳನ್ನು ಕ್ರೋಢೀಕರಿಸಲು ಕ್ರಮ ಕೈಗೊಂಡಿದ್ದೇವೆ. ಈ ವರ್ಷದ ಅನುದಾನದಲ್ಲಿಯೂ ಕೂಡ ಸನ್ಮಾನ್ಯ ಹಣಕಾಸು ಸಚಿವರು ಬಜೆಟನಲ್ಲಿ 250 ಕೋಟಿ ರೂ.ಗಳನ್ನು ಒದಗಿಸಿದ್ದಾರೆ. ಅದ್ದರಿಂದ ಆ ಕೆಲಸ ಕಾರ್ಯಗಳನ್ನು ತೀವ್ರಗತಿಯಿಂದ ಕೈಗೊಳ್ಳುತ್ತೇವೆ.

ಬೆಂಗಳೂರು ನಗರದಲ್ಲಿ ಸೊಳ್ಳೆಗಳ ಹಾವಳಿ

138 - ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ) : ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ಪಕ್ಷ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?